400 ಕಿ.ಮೀ. ಉದ್ದದ ರೂ. 1 ಕೋಟಿ 22 ಲಕ್ಷ ವೆಚ್ಚದ ಶಕ್ಯತಾ ವರದಿಯನ್ನು ತಯಾರಿಸಲು ಸರ್ಕಾರವು ಅನುಮೋದಿಸಿದಂತೆ.

3. ಮಂಗಳಾ ಕಾರ್ನಿಷ್ ವರ್ತುಲಾ ರಸ್ತೆ ಯೋಜನೆಗೆ ಸಂಬಂಧಿಸಿದಂತೆ ಪ್ರಾಧಿಕಾರವು ಶಕ್ಯತಾ ವರದಿಯನ್ನು ತಯಾರಿಸಲು ಕ್ರಮ ಕೈಗೊಂಡಿರುತ್ತದೆ. ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳು ಹಾಗೂ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಸಂಯೋಗದಲ್ಲಿ ಕಾಲಮಿತಿ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಪ್ರಕ್ರಿಯೆ ಮುಂದುವರೆಯುತ್ತಿದೆ.

4. ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಮಹತ್ವಕಾಂಕ್ಷಿ ಯೋಜನೆಗಳಲ್ಲಿ ಒಂದಾದ ಕರಾವಳಿಯ ಮೂರು ಜಿಲ್ಲೆಗಳ 10 ಪ್ರಮುಖ ಪಟ್ಟಣಗಳಲ್ಲಿ (ದಕ್ಷಿಣ ಕನ್ನಡ ಜಿಲ್ಲೆಯ ಪಡುಬಿದ್ರಿ, ಬಂಟ್ವಾಳ, ಕಿನ್ನಿಗೋಳಿ, ಉಡುಪಿ ಜಿಲ್ಲೆಯ ಉಡುಪಿ, ಉಪ್ಪುಂದ, ಯೆಡ್ತೆರೇ–ಬೈಂದೂರ್, ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಅಂಕೋಲಾ, ಶಿರಾಲಿ) ಸುಮಾರು 15 ಕೋಟಿ ರೂ. ವೆಚ್ಚದಲ್ಲಿ ಹೈದರಾಬಾದ್‌ನ ರಾಷ್ಟ್ರೀಯ ಮೀನುಗಾರಿಕಾ ಅಭಿವೃದ್ಧಿ ಮಂಡಳಿಯ ಸಹಯೋಗದೊಂದಿಗೆ ಆಧುನಿಕ ಮಹಿಳಾ ಮೀನು ಮಾರುಕಟ್ಟೆಗಳನ್ನು ಸ್ಥಾಪಿಸಲು ಅಗತ್ಯ ಕ್ರಮಕೈಗೊಂಡಿದೆ.

ಕರಾವಳಿ ಪ್ರವಾಸೋದ್ಯಮ ಅಭಿವೃದ್ಧಿ

395 (871) ಶ್ರೀ ಜೆ.ಡಿ. ನಾಯ್ಕ (ಭಟ್ಕಳ) ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಹಾಗೂ ಯುವಜನಸೇವೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಕರಾವಳಿ ಪ್ರವಾಸೋದ್ಯಮದ ಅಭಿವೃದ್ಧಿ ಬಗ್ಗೆ ಇಲಾಖೆಯಿಂದ ರಸ್ತೆ, ಕುಡಿಯುವ ನೀರು ಹಾಗೂ ಇತರೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಭಟ್ಕಳ–ಹೊನ್ನಾವರ ತಾಲ್ಲೂಕಿಗೆ ಎಷ್ಟು ಅನುದಾನ ಮಂಜೂರು ಮಾಡಿ ಬಿಡುಗಡೆ ಮಾಡಲಾಗಿದೆ; (ವಿವರ ನೀಡುವುದು)

ಆ) ಪ್ರವಾಸೋದ್ಯಮ ಇಲಾಖೆಯಿಂದ ಕರಾವಳಿ ಜಿಲ್ಲೆಗಳಲ್ಲಿ ಯಾವ ಪ್ರದೇಶವನ್ನು ಪ್ರವಾಸೋದ್ಯಮ ಸ್ಥಳವೆಂದು ಗುರುತಿಸಲಾಗಿದೆ (ವಿವರ ನೀಡುವುದು)

ಜಿ. ಜನಾರ್ಧನ ರೆಡ್ಡಿ (ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಹಾಗೂ ಯುವಜನಸೇವಾ ಸಚಿವರು)

ಅ) ಕಳೆದ ಮೂರು ವರ್ಷಗಳಲ್ಲಿ ಹೊನ್ನಾವರ ತಾಲ್ಲೂಕಿನ ಕಾಸರಕೋಡು ಕಡಲತೀರದಲ್ಲಿ ರೂ. 76.80 ಲಕ್ಷಗಳ ಅಂದಾಜು ವೆಚ್ಚದಲ್ಲಿ ವಿವಿಧ ಪ್ರವಾಸಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲಾಗುತ್ತಿದ್ದು, ರೂ. 62.43 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ ಜಿಲ್ಲೆರವರಿಗೆ ಬಿಡುಗಡೆ ಮಾಡಲಾಗಿದೆ. ಕಾಮಗಾರಿಗಳು ಪ್ರಗತಿಯಲ್ಲಿವೆ.

ಆ) ಕರಾವಳಿ ಜಿಲ್ಲೆಗಳಲ್ಲಿ ಗುರುತಿಸಲಾಗಿರುವ ಪ್ರವಾಸಿ ತಾಣಗಳು.

1) ದಕ್ಷಿಣ--ಕನ್ನಡ, ಮಂಗಳೂರು, ಸೂರತ್‌ಕಲ್, ಪಣಂಬೂರು, ಉಳ್ಳಾಲ–ಸೋಮೇಶ್ವರ, ಕಟೀಲು, ತಣ್ಣೀರುಭಾವಿ, ಪಿಲಿಕುಳ ನಿಸರ್ಗಧಾಮ, ಧರ್ಮಸ್ಥಳ, ವೇಣೂರು, ಕದ್ರಿಬೆಟ್ಟ, ಕುಕ್ಕೆ ಸುಬ್ರಮಣ್ಯ, ಬೇಂದ್ರೆತೀರ್ಥ, ಶಿರಾಡಿ, ಉಪ್ಪಿನಂಗಡಿ, ಮುಡುಬಿದ್ರೆ.

2) ಉಡುಪಿ–ಉಡುಪಿ, ಮಲ್ಪೆ, ಸೇಂಟ್ ಮೇರಿಸ್ ಐಲ್ಯಾಂಡ್, ಕಾಪು, ಕಾರ್ಕಳ, ಕುಂದಾಪುರ, ಮರವಂತೆ, ಕೊಲ್ಲೂರು, ಆನೆಜರಿ, ಕೂಡ್ಲು ತೀರ್ಥ.

3) ಉತ್ತರ ಕನ್ನಡ–ಕಾರವಾರ, ಕುರ್ಮಗಡ, ಆಂಜದೇವಿ ಐಲ್ಯಾಂಡ್, ದೇವಗಡ, ಉಳವಿ, ರಾಮನಗರ, ಕ್ಯಾಸಲ್ ರಾಕ್, ಯಲ್ಲಾಪುರ, ಮಾಗೋಡು ಫಾಲ್ಸ್, ಲಾಲ್‌ಗುಳಿ ಫಾಲ್ಸ್, ಹಳಿಯಾಳ, ದಾಂಡೇಲಿ, ಸಿದ್ದಾಪುರ, ಉಂಚಳ್ಳಿ ಫಾಲ್ಸ್, ಸಿರಸಿ, ಸೋಂದ, ಬನವಾಸಿ, ಗೋಕರ್ಣ, ಯಾಣ, ಧಾರೇಶ್ವರ, ಅಂಕೋಲ, ಭಟ್ಕಳ, ಮುರುಡೇಶ್ವರ, ಹೊನ್ನಾವರ, ಇಡಗುಂಜಿ.

ಕಾರವಾರ ರಸ್ತೆಯಲ್ಲಿ ಗಣಿ ವಸ್ತುಗಳನ್ನು ಸಾಗಿಸುವ ವಾಹನಗಳಿಂದ ಸಂಗ್ರಹವಾದ ಹಣ

396 (893) ಶ್ರೀ ಜೆ.ಡಿ. ನಾಯ್ಕ (ಭಟ್ಕಳ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ಆರ್ಥಿಕ ವರ್ಷಗಳಲ್ಲಿ ಹುಬ್ಬಳ್ಳಿ, ಅಂಕೋಲ, ಬಾಳೆಗುಳಿ ಮತ್ತು ಕಾರವಾರ ರಸ್ತೆಯಲ್ಲಿ ಗಣಿ ವಸ್ತುಗಳನ್ನು ಸಾಗಿಸುವ ವಾಹನಗಳಿಂದ ಸಂಗ್ರಹವಾಗಿರುವ ಹಣವೆಷ್ಟು; (ವಿವರ ನೀಡುವುದು)

ಆ) ಈ ರಸ್ತೆಯಲ್ಲಿ ಸಂಚರಿಸುವ ಕಬ್ಬಿಣದ ಅದಿರು, ಭಾರವಾದ ಕಲ್ಲುಗಳು ಹಾಗೂ ಇತರ ಗಣಿ ವಸ್ತುಗಳನ್ನು ಸಾಗಿಸುವ ಪ್ರತಿ ಟ್ರಕ್ಕಿಗೆ ಎಷ್ಟು ತೆರಿಗೆ/ಸೆಸ್ಸುಗಳನ್ನು ಸಂಗ್ರಹಿಸಲಾಗುವುದು; (ವಿವರ ನೀಡುವುದು)